# ಪತ್ರಿಕಾ ಪ್ರಕಟಣೆ

ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯಿಂದ ರಾಜ್ಯಾದ್ಯಾಂತ ವಸತಿ ಮತ್ತು ಇನ್ನಿತರ ಅತಿಥ್ಯ ಸೇವೆಗಳನ್ನು ಒದಗಿಸುವ ಹಲವಾರು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಬೇಕರಿಗಳು, ರೆಸಾರ್ಟ್‌ಗಳು ಹಾಗೂ ನೇತ್ರಾಣಿ ದ್ವೀಪದಲ್ಲಿ ಸ್ಕೂಬಾ ಡೈವಿಂಗ್ ಸೇವೆಗಳನ್ನು ಒದಗಿಸುವ ಉದ್ಯಮಗಳ ತಪಾಸಣೆಯನ್ನು ನಡೆಸಲಾಗಿರುತ್ತದೆ. ಈ ವಿಶೇಷ ಕಾರ್ಯಾಚರಣೆಯ ಉದ್ದೇಶವು ತೆರಿಗೆ ಪಾವತಿಯಿಂದ ಸಂಭವನೀಯ ವಂಚನೆಯನ್ನು ತಡೆಗಟ್ಟಲು ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳುವುದಾಗಿರುತ್ತದೆ ಹಾಗೂ ಉದ್ಯಮಗಳು ಕ್ರಿಸ್‌ಮಸ್, ವರ್ಷಾಂತ್ಯದ ರಜಾ ದಿನಗಳು ಹಾಗೂ ಹೊಸ ವರ್ಷಾಚರಣೆ ಅವಧಿಯಲ್ಲಿ ತೆರಿಗೆ ವಿಧಿಸಬಹುದಾದ ವಹಿವಾಟನ್ನು ಬಚ್ಚಿಡುವ ವಿಧಾನವನ್ನು ಪತ್ತೆ ಹಚ್ಚುವುದಾಗಿರುತ್ತದೆ.

ರಾಜ್ಯದ ವಿವಿಧ ಭಾಗಗಳಲ್ಲಿ ಅತಿಥ್ಯ ಸೇವೆಗಳಿಗೆ ಹೆಸರಾದ 242 ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಬೇಕರಿಗಳು ಮತ್ತು ರೆಸಾರ್ಟ್‌ಗಳಲ್ಲಿ ರಾಜ್ಯದ ಜಾರಿ ವಿಭಾಗದ ಅಧಿಕಾರಿಗಳು ತಪಾಸಣೆ ಕೈಗೊಂಡಿರುತ್ತಾರೆ. ಈ ಕಾರ್ಯಾಚರಣೆಯ ಸಮಯದಲ್ಲಿ, ಇಲಾಖೆಯ ಅಧಿಕಾರಿಗಳು ಸುಮಾರು 150 ಕೋಟಿ ರೂಪಾಯಿಗಳ ಬಚ್ಚಿಟ್ಟ ತೆರಿಗೆ ವಹಿವಾಟನ್ನು ಪತ್ತೆ ಹಚ್ಚಿರುತ್ತಾರೆ. ತೆರಿಗೆ ತಪ್ಪಿಸುವಿಕೆ, ಸಂಗ್ರಹಿಸಿದ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದಿರುವುದು, ಅನರ್ಹ ಹೂಡುವಳಿ ತೆರಿಗೆಯನ್ನು ಪಡೆಯುವುದು, ತೆರಿಗೆ ದರದ ತಪ್ಪಾದ ವರ್ಗೀಕರಣ, ಬಿಲ್‌ಗಳನ್ನು ನೀಡದಿರುವುದು, ಬಿಲ್‌ಗಳ ಬದಲಿಗೆ ಕೂಪನ್‌ಗಳನ್ನು ಮತ್ತು ಟೋಕನ್‌ಗಳ ವಿತರಣೆ, ಕ್ಲೌಡ್ ಸಂಗ್ರಹದಲ್ಲಿ ವಹಿವಾಟಿನ ದತ್ತಾಂಶ ಮರೆಮಾಚುವುದು, ಶಾಸನಬದ್ಧ ವಹಿವಾಟಿನ ಮಿತಿಯನ್ನು ಮೀರಿದ್ದರೂ ನೋಂದಣಿಯನ್ನು ಪಡೆಯದಿರುವುದು, ಮುಂತಾದ ತೆರಿಗೆ ತಪ್ಪಿಸುವಿಕೆಯ ಕಾರ್ಯ ವಿಧಾನಗಳನ್ನು ಪತ್ತೆಹಚ್ಚಲಾಗಿದೆ.

ಬಚ್ಚಿಟ್ಟ ತೆರಿಗೆ ವಹಿವಾಟಿನ ವಿವರಗಳನ್ನು ಸಂಗ್ರಹಿಸಲು ಕೆಲವು ವರ್ತಕರು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವುದು ಸದರಿ ಕಾರ್ಯಚರಣೆಯಲ್ಲಿ ಬೆಳಕಿಗೆ ಬಂದಿದೆ. ಅಧಿಕಾರಿಗಳು ಲ್ಯಾಪ್‌ಟಾಪ್, ಮೊಬೈಲ್ ಫೋನ್, ದತ್ತಾಂಶ ಸಂಗ್ರಹಣ ಸಾಧನಗಳು, ಮುಂತಾದವುಗಳಲ್ಲಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಲಾದ ದೋಷಾರೋಪಣೆಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಕೆಲವು ವರ್ತಕರು ಹಲವು ಕ್ಯೂಆರ್ ಕೋಡ್‌ಗಳನ್ನು ಬಳಸುತ್ತಾ, ಅವುಗಳಲ್ಲಿ ಕೆಲವೇ ಕ್ಯೂಆರ್ ಕೋಡ್‌ಗಳ ಮೂಲಕ ನಡೆಸಲಾದ ವಹಿವಾಟುಗಳನ್ನು ಘೋಷಿಸಿಕೊಳ್ಳುತ್ತಿರುವುದು ಸಹ ಕಂಡುಬಂದಿರುತ್ತದೆ. ಅಂತಹ ಕ್ಯೂಆರ್ ಕೋಡ್‌ಗಳ ಮೂಲಕ ವ್ಯವಹರಿಸಲಾದ ಬಚ್ಚಿಟ್ಟ ತೆರಿಗೆ ವಹಿವಾಟುಗಳನ್ನು ಪತ್ತೆ ಹಚ್ಚುವಲ್ಲಿ ಅಧಿಕಾರಿಗಳು ಯಶಸ್ವಿಯಾಗಿರುತ್ತಾರೆ.

ಮುಂದುವರೆದು, ಜಾರಿ ವಿಭಾಗ ಮೇಲ್ಕಂಡ ಹೋಟೆಲ್ ಹಾಗೂ ಬೇಕರಿಗಳ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಲು ಕಾನೂನಿನ ನಡಾವಳಿಗಳನ್ನು ಪ್ರಾರಂಭಿಸಿದ್ದು, ತನಿಖೆಯು ಮತ್ತಷ್ಟು ಪ್ರಗತಿಯಲ್ಲಿದೆ. ಹೆಚ್ಚುವರಿ ದಾಖಲೆಗಳು ಹಾಗೂ ತೆರಿಗೆ ವಂಚನೆಯ ಬಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಅನೇಕ ವರ್ತಕರು ತೆರಿಗೆ ಹೊಣೆಗಾರಿಕೆಯನ್ನು ಸ್ವಯಂ ಪ್ರೇರಣೆಯಿಂದ ಪಾವತಿಸಲು ಪ್ರಾರಂಭಿಸಿದ್ದಾರೆ.

ವಾಣಿಜ್ಯ ತೆರಿಗೆ ಇಲಾಖೆಯು ವರ್ತಕರಿಂದ ತೆರಿಗೆ ವಂಚನೆಯನ್ನು ತಡೆಗಟ್ಟಲು ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳುತ್ತಿದೆ. ಸರ್ಕಾರದ ಆದಾಯದ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಇಲಾಖೆಯು ಹೆಚ್ಚಿನ ದಕ್ಷತೆ ಮತ್ತು ವೃತ್ತಿಪರತೆಯನ್ನು ಪ್ರದರ್ಶಿಸಿದೆ. ಗ್ರಾಹಕರು ತೆರಿಗೆ ವಂಚನೆ ಸಂಬಂಧಿಸಿದ ಯಾವುದೇ ಅನುಮಾನಸ್ಪದ ಚಟುವಟಿಕೆಗಳ ಬಗ್ಗೆ ಜಾಗರೂಕರಾಗಿದ್ದು, ಮಾಹಿತಿಗಳಿದ್ದಲ್ಲಿ, ವರದಿ ಮಾಡಲು ವಾಣಿಜ್ಯ ತೆರಿಗೆ ಇಲಾಖೆಯು ಸಾರ್ವಜನಿಕರಲ್ಲಿ ಮನವಿ ಮಾಡುತ್ತದೆ.

ಸಹಿ/-

ಸಿ. ಶಿಖಾ. ಭಾ.ಆ.ಸೇ.

ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)